# ಶ್ರೀಮಾತೆಯವರ ನೆನಪುಗಳು

ಇಂಗ್ಲಿಷ್ ಮೂಲ : **ಕುಮುದ ಬಂಧು ಸೇನ್**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

**ಭಾಗ - ೪**

ಒಂದು ಸಲ ಬಲರಾಮ ಬೋಸ್ ಅವರ ಕಲ್ಕತ್ತೆಯ ನಿವಾಸದಲ್ಲಿ ಸ್ವಾಮಿ ಯೋಗಾನಂದರ ಮತ್ತು ಗಿರೀಶ ಚಂದ್ರ ಘೋಷರ ನಡುವೆ ಅತ್ಯಂತ ಮಹತ್ವದ ಹಾಗೂ ಆಳವಾದ ಚರ್ಚೆ ನಡೆಯಿತು. ಈ ಚರ್ಚೆಯ ಸಾರಾಂಶವನ್ನು ಇಲ್ಲಿ ನೀಡುವುದು ಅಪ್ರಸ್ತುತವಾಗಲಾರದು — ಏಕೆಂದರೆ, ನಿಜಕ್ಕೂ ಇದು ಅತ್ಯಂತ ಮುಖ್ಯವಾದುದು ಹಾಗೂ ಆಳವಾದ ಚಿಂತನೆಗೆ ಆಸ್ಪದ ಮಾಡಿಕೊಡುವಂತಹದು. ಇದು ನಡೆದುದು ಸುಮಾರು ೧೮೯೭ರ ಜುಲೈ ತಿಂಗಳ ಮಧ್ಯಭಾಗದಲ್ಲಿ. ಸ್ವಾಮಿ ಯೋಗಾನಂದರು ಎರಡು ತಿಂಗಳ ಕಾಲ ಆಲ್ಮೋರಾದಲ್ಲಿ ಸ್ವಾಮಿ ವಿವೇಕಾನಂದರೊಡನೆ ಓಡಾಡುತ್ತಿದ್ದು, ಅಲ್ಲಿಂದ ಈಗತಾನೇ ಕಲ್ಕತ್ತೆಗೆ ಮರಳಿದ್ದರು. ಸ್ವಾಮೀಜಿ ಹವಾ ಬದಲಾವಣೆಗಾಗಿ ಆಲ್ಮೋರಾಗೆ ಹೋಗಿದ್ದರು, ಆದರೆ ಅಲ್ಲಿನ ಹವೆ ಯೋಗಾನಂದರ ಆರೋಗ್ಯಕ್ಕೆ ಅಷ್ಟಾಗಿ ಒಗ್ಗದ ಕಾರಣ ಸ್ವಲ್ಪ ಸಮಯದಲ್ಲೇ ಅವರು ಹಿಂದಿರುಗಿದ್ದರು. ಹೊರನೋಟಕ್ಕೆ ಅವರು ಚೆನ್ನಾಗಿಯೇ ಇದ್ದರು; ಆದರೆ ಅವರಿಗೆ ಏನೋ ಕಾಯಿಲೆ ಇದ್ದಂತೆ ಅನ್ನಿಸುತ್ತಿತ್ತು. ಸ್ವಾಮಿ ವಿವೇಕಾನಂದರು ಯೋಗಾನಂದರ ಆರೋಗ್ಯದ ಬಗ್ಗೆ ಚಿಂತಿತರಾಗಿದ್ದರು ಹಾಗೂ ಸಾಧ್ಯವಾದಷ್ಟು ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿದ್ದರು. ಮುಂದೊಮ್ಮೆ ಸ್ವಾಮಿ ಯೋಗಾನಂದರು ಗಿರೀಶ ಘೋಷ್ ಅವರಿಗೆ ಹೇಳಿದಂತೆ, ಸ್ವಾಮೀಜಿಯವರ ಚಿಂತೆಗೆ ಕಾರಣರಾಗುವುದು ಅವರಿಗಿಷ್ಟವಿರಲಿಲ್ಲ. ಏಕೆಂದರೆ ಸ್ವಾಮೀಜಿಯವರ ಆರೋಗ್ಯವೇ ಅಷ್ಟೊಂದು ಚೆನ್ನಾಗಿರಲಿಲ್ಲ.



ಸ್ವಾಮಿ ಯೋಗಾನಂದರು ಗಿರೀಶ ಘೋಷರೊಡನೆ ಮಾತನಾಡುತ್ತ ಹೇಳಿದರು: ‘‘ಸ್ವಾಮೀಜಿಯವರು ನೇರವಾಗಿ ಶ್ರೀಮಾತೆಯವರ ಮಾರ್ಗದರ್ಶನದಲ್ಲಿ ಸ್ತ್ರೀಯರಿಗಾಗಿ ಒಂದು ಮಠವನ್ನು ಆರಂಭಿಸುವ ಇಚ್ಛೆಯನ್ನು ಹೊಂದಿದ್ದಾರೆ. ಈ ಸ್ತ್ರೀಯರ ಮಠದಲ್ಲಿ ಶ್ರೀರಾಮಕೃಷ್ಣರ ಎಲ್ಲ ಭಕ್ತೆಯರೂ ಒಟ್ಟಿಗೆ ಜೀವನ ನಡೆಸಲು ಸಾಧ್ಯವಾಗುವುದು. ಇತರ ಮಹಿಳೆಯರು, ಹಾಗೂ ತ್ಯಾಗ ಹಾಗೂ ಧ್ಯಾನಾದಿ ಸಾಧನೆಯ ಜೀವನ ನಡೆಸಲಿಚ್ಛಿಸುವ ಪಾಶ್ಚಾತ್ಯ ಮಹಿಳೆಯರು ಅವರೊಂದಿಗಿದ್ದು, ಅವರೆಲ್ಲರೂ ಈ ಭಕ್ತೆಯರ ಜೀವನದೊಂದಿಗೆ ನಿಕಟ ಸಂಪರ್ಕ ಹೊಂದಿ ಅವರಿಂದ ಅಗಾಧ ಪ್ರೇರಣೆಯನ್ನು ಪಡೆಯಬಹುದು. ಬಾಲವಿಧವೆಯರು ಹಾಗೂ ಅವಿವಾಹಿತ ಮಹಿಳೆಯರು — ಅತ್ಯಂತ ಉನ್ನತವಾದ ಆಧ್ಯಾತ್ಮಿಕ ಆದರ್ಶಕ್ಕಾಗಿ ಮತ್ತು ದೇಶದೆಲ್ಲೆಡೆ ಮಹಿಳೆಯರ ಏಳಿಗೆಗಾಗಿ ತಮ್ಮ ಜೀವನವನ್ನು ಸಮರ್ಪಿಸಬಯಸುವವರು ಈ ಸ್ತ್ರೀಯರ ಮಠದ ಸದಸ್ಯರಾಗುವ ಅರ್ಹತೆ ಹೊಂದುತ್ತಾರೆ. ಅವರೆಲ್ಲರ ದಾರಿದೀಪವಾಗಿರುವ ಶ್ರೀಮಾತೆಯವರ ಅನುಗ್ರಹದಿಂದಾಗಿ ಪ್ರಾಚೀನ ಕಾಲದವರಾದ ಗಾರ್ಗಿ, ಮೈತ್ರೇಯಿಯಂತಹ ಬ್ರಹ್ಮವಾದಿನಿಯರು ಮೂಡಿ ಬರುವರು. ಹಿಂದಿನ ಪುರಾಣ, ಇತಿಹಾಸಗಳಲ್ಲಿ ವರ್ಣಿಸಿದಂತಹ ಪ್ರಾಚೀನ ಧೀರ ಮಹಿಳೆಯರು ಹಾಗೂ ಬ್ರಹ್ಮವಾದಿನಿಯರಿಗಿಂತಲೂ ಶ್ರೇಷ್ಠರಾದ ಮಹಾನ್ ಸ್ತ್ರೀಯರು ಇವರ ನಡುವೆ ಉದಿಸುವರು. ಶ್ರೀಮಾತೆಯವರ ಜ್ವಲಂತ ನಿದರ್ಶನದಿಂದ ಅವರ ಪಾವಿತ್ರ್ಯ, ಉನ್ನತ ವ್ಯಕ್ತಿತ್ವಗಳು ಅವರ ಆಧ್ಯಾತ್ಮಿಕ ಅನುಭವಗಳ ಹಿನ್ನೆಲೆಯಲ್ಲಿ ಅವರು ಆಡಿದ ಮಾತುಕತೆಗಳು, ಅವರ ದೈವೀ ಪ್ರೀತಿ ಇವು ಮುಂದೆ ಬರಲಿರುವ ಮಠದ ಸಂನ್ಯಾಸಿನಿಯರಿಗೆ ಪ್ರೇರಣೆ ನೀಡುವುವು; ಅವರನ್ನು ಉನ್ನತ ಆದರ್ಶದೆಡೆಗೆ ಕರೆದೊಯ್ಯುವವು. ಅಂತೆಯೇ ಅದರಿಂದ ಅವರಲ್ಲಿ ಅಡಗಿರುವ ಚೈತನ್ಯವು ಜಾಗೃತವಾಗುವುದು. ಅವರು ಸಂಪೂರ್ಣವಾಗಿ

ಪರಿವರ್ತನೆ ಹೊಂದಿ, ತಮ್ಮ ಶಕ್ತಿಯ ನಿಜವಾದ ಅರಿವು ಅವರಿಗುಂಟಾಗುವುದು. ಮಾನವನ ಏಳಿಗೆಗಾಗಿ ಅವರು ಕೂಡ ನಿರ್ಭೀತಿಯಿಂದ ಕಾರ್ಯವೆಸಗುವಂತಾಗುವುದು.

''ಸ್ವಾಮೀಜಿ ಅತ್ಯಂತ ಭಾವಪೂರ್ಣವಾಗಿ ನನಗೆ ಹೇಳಿದ್ದರು: 'ನಮ್ಮ ಮಾತೆಯವರು ಆಧ್ಯಾತ್ಮಿಕ ಶಕ್ತಿಯ ವಿಶಾಲ ಸಾಗರ. ಆದರೂ ಹೊರನೋಟಕ್ಕೆ ಅವರು ಆಳವಾದ ಸಮುದ್ರದಂತೆ ಗಂಭೀರ. ಭಾರತದ ಇತಿಹಾಸದಲ್ಲಿ ಅವರ ಆಗಮನವು ಒಂದು ಹೊಸ ಯುಗವನ್ನೇ ಆರಂಭಿಸುವುದು. ಅವರು ಜೀವನದ ಮೂಲಕವೂ ತಮ್ಮ ಉಪದೇಶಗಳ ಮೂಲಕವೂ ತಿಳಿಸಿಕೊಟ್ಟ ಆದರ್ಶಗಳು ಕೇವಲ ಭಾರತದ ಮಹಿಳೆಯರ ಮುಕ್ತಿಗಾಗಿ ಮಾತ್ರವಲ್ಲ, ಇಡಿ ಪ್ರಪಂಚದ ಎಲ್ಲ ಮಹಿಳೆಯರ ಮನಸ್ಸು, ಹೃದಯಗಳನ್ನು ಪ್ರವೇಶಿಸಿ, ಅವರನ್ನೆಲ್ಲ ಆಧ್ಯಾತ್ಮಿಕಗೊಳಿಸುವುದು. ಮಾತೃತ್ವದಲ್ಲಿ ಸ್ತ್ರೀತ್ವವು ಅತಿಹೆಚ್ಚಾಗಿ ಪ್ರಕಟಗೊಂಡಿದೆ — ವಿಶೇಷವಾಗಿ, ಭಾರತದಲ್ಲಿ. ಅದು ಎಲ್ಲ ಸ್ತ್ರೀಯರಲ್ಲಿ ಅಂತರ್ಗತವಾಗಿರುವ ಮೂಲಸ್ವಭಾವ. ಚಿಕ್ಕ ಹುಡುಗಿಯಾಗಿರುವಾಗಲೇ ಅವರಲ್ಲಿ ಅದನ್ನು ಗುರುತಿಸಬಹುದು.'

''ಪಶ್ಚಿಮದಲ್ಲಿ ಸಮಾಜದ ಒಟ್ಟು ರಚನೆಯೇ ಮಹಿಳೆಯರ ಸತೀತ್ವವನ್ನು ಆಧರಿಸಿದೆ. ಆದರೆ ಮಾತೃತ್ವವೇ ದೈವೀ ಪ್ರೇಮದ ನಿಜವಾದ ಅಭಿವ್ಯಕ್ತಿ. ಅದು ಆಕಾಶದಂತೆ ಭವ್ಯ, ಸಭ್ಯ ಹಾಗೂ ವಿಶಾಲ. ಹಲವು ವಿದೇಶೀ ಜನಾಂಗಗಳ ಮತ್ತು ಸಂಸ್ಕೃತಿಗಳ ಸಂಪರ್ಕದಿಂದಾಗಿ ಭಾರತೀಯ ಸಮಾಜಕ್ಕೆ ವೈವಿಧ್ಯಮಯವಾದ ಭಾವನೆಗಳು ಹಾಗೂ ಪದ್ಧತಿಗಳು ಪರಿಚಯಿಸಲ್ಪಟ್ಟವು. ಅವುಗಳು ನಮ್ಮ ಸಮಾಜದಲ್ಲಿ ಯಾವಾಗಲೂ ಭದ್ರವಾಗಿ ನೆಲೆನಿಂತಿದ್ದ ಮಾತೃತ್ವದ ನಿಜವಾದ ಆದರ್ಶವನ್ನು ಕಲುಷಿತಗೊಳಿಸಿವೆ; ಇದರಿಂದಾಗಿ ನಾವು ಕ್ರಮೇಣ ನಮ್ಮ ಪ್ರಾಚೀನ ಆದರ್ಶವೆಂಬ ಲಂಗರಿನಿಂದ ದೂರ ಸರಿದಿದ್ದೇವೆ — ಇದು ವೈಯಕ್ತಿಕವಾಗಿಯೂ ನಿಜ, ಸಾಮೂಹಿಕವಾಗಿಯೂ ನಿಜ. ಈ ಶ್ರೇಷ್ಠ ಆದರ್ಶವನ್ನು ಎತ್ತಿ ಹಿಡಿಯಲು ಹಾಗೂ ಪುನರುಜ್ಜೀವನಗೊಳಿಸಲೆಂದೇ ಶ್ರೀರಾಮಕೃಷ್ಣರು ನಮ್ಮ ನಡುವೆ ಅವತರಿಸಿ ಬಂದಿದ್ದಾರೆ. ತಮ್ಮ ಜೀವನ, ಸಾಕ್ಷಾತ್ಕಾರಗಳ ಮೂಲಕ ಅವರು ಇದನ್ನು ಸಾಧಿಸಿದರು. ವಿವಿಧ ಧರ್ಮಗಳ ವಿಧಿವಿಧಾನಗಳ ರೀತಿಯಲ್ಲಿ ಅವರು ಮಾಡಿದ ಹಲವು ಬಗೆಯ ಸಾಧನೆಗಳ ನಡುವೆಯೂ ಅವರು ಭಗವಂತನ ಮಾತೃರೂಪದ ಶ್ರೇಷ್ಠ ಆದರ್ಶದಿಂದ ದೂರ ಸರಿಯಲಿಲ್ಲ. ಅವರು ಬ್ರಾಹ್ಮಣಿಯನ್ನು ತಮ್ಮ ಮೊದಲ ಗುರುವಾಗಿ ಸ್ವೀಕರಿಸಿದರು[*] ಅವರು ಸರ್ವಸಂಗ ಪರಿತ್ಯಾಗದ ಸಂನ್ಯಾಸ ಜೀವನವನ್ನು ಸ್ವೀಕರಿಸುವಾಗಲೂ ತಮ್ಮ ಪತ್ನಿಯನ್ನು ತ್ಯಜಿಸಲಿಲ್ಲ. ಬದಲಾಗಿ, ಅವರು ತಮ್ಮ ತಾಯಿಯಾದ ಚಂದ್ರಾದೇವಿಯಲ್ಲಿ ಕಂಡಂತೆ ಸಾಕ್ಷಾತ್ ಜಗನ್ಮಾತೆಯನ್ನೇ ತಮ್ಮ ಪತ್ನಿಯಲ್ಲಿ ಕಂಡರು. ಅವರಲ್ಲಿ ಪರಿಶುದ್ಧ ಪ್ರೇಮ ಭಕ್ತಿಗಳು ಪರಿಪೂರ್ಣವಾಗಿ ಪ್ರಕಟಗೊಂಡಿರುವುದನ್ನು ಅವರು ಸ್ಪಷ್ಟವಾಗಿ ಕಂಡರು. ಅವರ ಪಾಲಿಗೆ ಅವರು ಜಗನ್ಮಾತೆಯ ಜೀವಂತ ಮೂರ್ತಿಯಾಗಿ ಗೋಚರಿಸಿದರು. ಅವರ ಈ ತಿಳಿವಳಿಕೆ ಭ್ರಾಂತಿಯೋ ಒಣ ಆದರ್ಶವೋ ಆಗಿರಲಿಲ್ಲ. ಅದು ಅವರ ಅತ್ಯುನ್ನತ ಸಾಕ್ಷಾತ್ಕಾರದ ದಿವ್ಯಾನಂದದ, ಉಚ್ಚ ಅವಸ್ಥೆಯ ಅನುಭವದಿಂದ ಮೂಡಿ ಬಂದ ಅರಿವಾಗಿತ್ತು. ಶ್ರೀಮಾತೆಯವರ ಮಾತೃವಾತ್ಸಲ್ಯ, ಸಹಜ ಪ್ರೀತಿ ಇವುಗಳು ಪ್ರಾಪಂಚಿಕ ಸಂಬಂಧಗಳಿಂದ ಮೂಡಿ ಬಂದವುಗಳಲ್ಲ ; ಬದಲಾಗಿ ಅವು ಅವತಾರಪುರುಷರ ಅಸಾಧಾರಣ ಲಕ್ಷಣವಾದ, ಅನಂತ ದಿವ್ಯ ಪ್ರೇಮದಿಂದ ತಾನೇತಾನಾಗಿ ಉಕ್ಕಿ ಬಂದವುಗಳು. ಯಾವುದೇ ಪ್ರಾಪಂಚಿಕ ಭೇದಭಾವಗಳಿಲ್ಲದ, ತನ್ನೆಲ್ಲ ಮಕ್ಕಳ ಸೇವೆಗೆ ಸಮರ್ಪಿತವಾದ ಅವರ ಜೀವನವು ನಿಜವಾಗಿಯೂ ಮಾತೃತ್ವದ ಆದರ್ಶವನ್ನು ಬಿಂಬಿಸುತ್ತಿತ್ತು. ಅವರ ಕೃಪೆಯು ತಮ್ಮ ಸಂಬಂಧಿಕರಿಗೋ, ತಮ್ಮ ಭಕ್ತರಿಗೋ, ತಮ್ಮ ಮನೆಗೋ ಅಥವಾ ಊರಿಗೋ ಸೀಮಿತವಾಗಿರಲಿಲ್ಲ. ತಮ್ಮ ಕೃಪೆಯನ್ನು ಯಾಚಿಸಿ ತಮ್ಮ ಬಳಿಗೆ ಬಂದ ಎಲ್ಲರಿಗೂ ಅದು ಮುಕ್ತವಾಗಿ ದೊರಕುತ್ತಿತ್ತು. ಅವರಲ್ಲಿ ಲೌಕಿಕ, ಆಧ್ಯಾತ್ಮಿಕ ಕರ್ತವ್ಯಗಳೆರಡೂ ಒಂದಾಗಿ ಬೆಸೆದು, ಮಾತೃಪ್ರೇಮದ ಕಾರ್ಯವಾಗಿ ವ್ಯಕ್ತವಾಗುತ್ತಿತ್ತು. ಇಂತಹ ಮಾತೃತ್ವದ ಆದರ್ಶವನ್ನು ಕುರಿತು ಸ್ವಾಮೀಜಿಯವರು ಅತ್ಯಂತ ಗೌರವದಿಂದ ಮಾತನಾಡುತ್ತಿದ್ದರು. ಪ್ರತಿಯೊಂದು ದೇಶದ ಮಹಿಳೆಯರನ್ನೂ ಅದು ಔನ್ನತ್ಯಕ್ಕೆ ಕರೆದೊಯ್ಯುವುದು ಎಂದು ಅವರು ಹೇಳುತ್ತಿದ್ದರು. ನಿಯೋಜಿತವಾಗಿರುವ ಸ್ತ್ರೀಯರ ಮಠವು ಶ್ರೀಮಾತೆಯವರ ಮಾರ್ಗದರ್ಶನ ಹಾಗೂ ಪ್ರೇರಣೆಯಿಂದ ಈ ಶ್ರೇಷ್ಠ ಆದರ್ಶವನ್ನು ಪ್ರಚಾರ ಮಾಡಲು ಕೇಂದ್ರ ಸಂಸ್ಥೆಯಾಗುವುದು.''

ಇದಕ್ಕೆ ಉತ್ತರವಾಗಿ ಗಿರೀಶ್ ಘೋಷ್ ಹೇಳಿದರು: ''ನಮ್ಮ ಮಹಿಳೆಯರ ಸ್ಥಿತಿಗತಿಯನ್ನು ಹಾಗೂ ನಮ್ಮ ಸಮಾಜವನ್ನು ಮೇಲೆತ್ತುವುದು ಅತ್ಯಂತ ನೂತನವಾದ ಹಾಗೂ ಅತ್ಯಂತ ಧೀರೋದಾತ್ತವಾದ ಭಾವನೆ. ಸ್ವಾಮೀಜಿಯವರ ಇಚ್ಛೆ ಪೂರೈಸಲೇಬೇಕು. ಈ ಯೋಜನೆಗೆ ಸಂಪೂರ್ಣ ಬೆಂಬಲ ನೀಡುವುದರಲ್ಲಿ ನನಗೆ ಯಾವುದೇ ಹಿಂಜರಿಕೆಯಿಲ್ಲ. ಸ್ವಾಮೀಜಿಯವರ ಆರೋಗ್ಯ ಇಷ್ಟೊಂದು ಹದಗೆಟ್ಟಿರುವಾಗ ಅವರು ಇಂತಹ ಗುರುತರ ಜವಾಬ್ದಾರಿಯನ್ನು ಕೈಗೆತ್ತಿಕೊಳ್ಳುವುದು ಯೋಗ್ಯವಲ್ಲ. ಅವರು ನಮಗೆ ಏನು ಮಾಡಲು ಹೇಳುತ್ತಾರೋ ಅದನ್ನು ನಾವು ಚಾಚೂ ತಪ್ಪದೆ ಪಾಲಿಸುತ್ತೇವೆ, ನಿಜ. ಆದರೆ ಅವರ ಆರೋಗ್ಯ ಹದಗೆಡುತ್ತಿರುವುದು ನಮಗೆಲ್ಲ ಚಿಂತೆಯನ್ನುಂಟು

[*] ಭೈರವಿ ಬ್ರಾಹ್ಮಣಿ ಎಂಬ ಸಂನ್ಯಾಸಿನಿ ಅವಳು. ತಾಂತ್ರಿಕ ಹಾಗೂ ವೈಷ್ಣವ ಪಂಥಗಳ ಸಾಧನೆಯ ವಿಧಾನಗಳಲ್ಲಿ ಆಕೆ ಪರಿಣತಳಾಗಿದ್ದಳು. ಶ್ರೀರಾಮಕೃಷ್ಣರ ಆಧ್ಯಾತ್ಮಿಕ ವಿಕಸನದಲ್ಲಿ ಅವಳು ಪ್ರಧಾನ ಪಾತ್ರ ವಹಿಸಿದ್ದಳು. ಶ್ರೀರಾಮಕೃಷ್ಣರು ಭಗವಂತನ ಅವತಾರವೆಂದು ಅವಳು ಎಲ್ಲರೆದುರು ಸಾರಿದ್ದಳು.

ಮಾಡಿದೆ. ವೈದ್ಯರುಗಳು ಕೂಡ ಅವರು ಸಂಪೂರ್ಣ ವಿಶ್ರಾಂತಿ ಪಡೆಯಬೇಕು ಎನ್ನುತ್ತಿದ್ದಾರೆ.''

ಸ್ವಾಮಿ ಯೋಗಾನಂದರು ಹೇಳಿದರು, ''ದೈಹಿಕ ಅನಾರೋಗ್ಯವಾಗಿರಲಿ, ಇನ್ನೇನಾದರೂ ಅಡೆತಡೆಯಾಗಿರಲಿ, ಅದಾವುದೂ ಅವರನ್ನು ಹಿಂಜರಿಯುವಂತೆ ಮಾಡಲಾರದು. ಜನರಿಗೆ ಅಥವಾ ಸಮಾಜಕ್ಕೆ ಹಿತವನ್ನು ಮಾಡುವುದೆಂದು ಅವರು ದೃಢವಾಗಿ ನಂಬಿರುವ ಯೋಜನೆಗಳನ್ನು ಅವರು ಮಾಡಿಯೇ ತೀರುತ್ತಾರೆ. ಈಗಿನ ಅನಾರೋಗ್ಯದ ಪರಿಸ್ಥಿತಿಯಲ್ಲೂ ಅವರಿಗೆ ಬೇರೆ ಆಲೋಚನೆಗಳಿಲ್ಲ. ಅವರ ಅನಾರೋಗ್ಯವನ್ನು ಕುರಿತು ನಾವೆಲ್ಲ ಚಿಂತಿಸುವುದನ್ನು ನೋಡಿ ಅವರು ಸುಮ್ಮನೆ ನಗೆ ಬೀರುತ್ತಾರೆ. ಸ್ತ್ರೀಯರ ಮಠವನ್ನು ಆರಂಭಿಸುವ ಯೋಜನೆಯ ಬಗ್ಗೆ ಅವರು ಹೇಳಿದ್ದನ್ನೆಲ್ಲ ಕೇಳಿ ನಾನು ಹೇಳಿದೆ: 'ಸಮಾಜಕ್ಕೆ ಒಳಿತನ್ನು ಉಂಟುಮಾಡುವುದು ಎಂದು ನೀನು ಭಾವಿಸಿದ್ದನ್ನೆಲ್ಲ ಮಾಡು. ಠಾಕೂರರ ಬಗ್ಗೆ ನಾವು ಎಲ್ಲ ಜನರ ಮುಂದೆ ಪ್ರಚಾರ ಮಾಡಲಾರಂಭಿಸಿದರೆ ಅವರ ದೇಹ ಉಳಿಯಲಾರದು ಎಂದು ಅವರೇ ಹೇಳಿದ್ದು ನಿನಗೆ ನೆನಪಿಲ್ಲವೆ? ಶ್ರೀಮಾತೆಯವರ ವಿಷಯದಲ್ಲೂ ಇದೇ ನಿಜ. ಎಂತೆಂಥವರೆಲ್ಲ ಬಂದು ಶ್ರೀಮಾತೆಯವರನ್ನು ಭೇಟಿಯಾಗುವುದು, ಅವರಿಗೆ ಪ್ರಣಾಮ ಮಾಡುವಾಗ ಅವರ ಪಾದಗಳನ್ನು ಸ್ಪರ್ಶಿಸುವುದು ಇದಕ್ಕೆಲ್ಲ ನಾನು ಬಿಡಲಾರೆ. ಪರಿಶುದ್ಧ ವ್ಯಕ್ತಿತ್ವವುಳ್ಳ ಪ್ರಾಮಾಣಿಕ ಭಕ್ತರು ಮಾತ್ರ ಅವರ ದರ್ಶನ ಪಡೆಯುವಂತೆ ನಾನು ನೋಡಿಕೊಳ್ಳುವೆ. ಆದ್ದರಿಂದ ಸಹೋದರ, ನಿನ್ನಲ್ಲಿ ವಿನಂತಿ — ಸದ್ಯಕ್ಕೆ ಶ್ರೀಮಾತೆಯವರಿಗೆ ತೊಂದರೆ ಕೊಡಬೇಡ. ಅಕಳಂಕ ಸ್ವಭಾವದ ಹಾಗೂ ಆಧ್ಯಾತ್ಮಿಕ ಸಾಕ್ಷಾತ್ಕಾರ ಹೊಂದಿದ ಭಕ್ತೆಯರ ಸಹಾಯದಿಂದ ನೀನು ಸ್ತ್ರೀಯರ ಮಠವನ್ನು ಬೇಕಾದರೆ ಆರಂಭಿಸಬಹುದು; ವಿವಿಧ ವಿಷಯಗಳಲ್ಲಿ , ಕೆಲಸಗಳಲ್ಲಿ ಅರಿವನ್ನು ಹೊಂದಿದ ಅವರು ಯಾವುದೇ ಗಂಡಸರ ಸಹಾಯವಿಲ್ಲದೆ ಸಂಸ್ಥೆಯನ್ನು ನಡೆಸುವ ಸಾಮರ್ಥ್ಯ ಹೊಂದಿರಲಿ. ಹೀಗಿರುವಾಗ ನಮ್ಮ ಸಾಧುಗಳ ಸಹಾಯ ಅಗತ್ಯವಿರಲಾರದು.' ನಾನು ಹೀಗೆ ಹೇಳಿ ಮುಗಿಸಿದ ಕೂಡಲೇ ಸ್ವಾಮೀಜಿ ಹೃತ್ಪೂರ್ವಕವಾಗಿ ನನಗೆ ಕೃತಜ್ಞತೆ ತಿಳಿಸಿ, 'ಮಂತ್ರಿಗಳೆ, ಠಾಕೂರರ ಮಾತುಗಳನ್ನು ನೆನಪಿಸಿ ಸರಿಯಾದ ಸಲಹೆಯನ್ನೇ ನನಗೆ ನೀಡಿದ್ದೀರಿ. ನಾನು ಶ್ರೀಮಾತೆಯವರಿಗೆ ತೊಂದರೆ ಕೊಡಲಾರೆ. ಅವರು ತಮಗೆ ಇಚ್ಛೆ ಬಂದ ರೀತಿಯಲ್ಲಿ , ತಮ್ಮ ಇಷ್ಟದಂತೆ ತಮ್ಮ ಧ್ಯೇಯಾದರ್ಶಗಳನ್ನು ಪೂರೈಸಲಿ. ಅವರಿಗೆ ನಿರ್ದೇಶನ ನೀಡಲು ನಾವು ಯಾರು? ನಿಜವಾಗಿಯೂ ಅವರ ಆಶೀರ್ವಾದದಿಂದಲೇ ನಾವು ಎಲ್ಲವನ್ನೂ ನೆರವೇರಿಸಬಲ್ಲೆವು. ಸ್ವತಃ ನಾನೇ ಅವರ ಆಶೀರ್ವಾದದ ಬಲವನ್ನು ನೋಡಿದ್ದೇನೆ. ಅದು ಅದ್ಭುತಗಳನ್ನೇ ಮಾಡಬಲ್ಲದು.' ಆದ್ದರಿಂದ ಸಂನ್ಯಾಸಿನಿಗಳ ಮಠದ ಅಧ್ಯಕ್ಷೆಯನ್ನಾಗಿ ಶ್ರೀಮಾತೆಯವರನ್ನು ಮಾಡಲು ಸ್ವಾಮೀಜಿ ಒತ್ತಾಯಿಸಲಾರರು.''

ಗಿರೀಶ್ ಘೋಷ್ ಅದಕ್ಕೆ ಉತ್ತರ ಕೊಟ್ಟರು: ''ಯೋಗೇನ್ ಸ್ವಾಮಿ[೨], ನೀವು ನಿಜವಾಗಿಯೂ ಅಂಗರಕ್ಷಕರ ಕೆಲಸ ಮಾಡಿದ್ದೀರಿ. ಸ್ವಾಮೀಜಿಯವರೊಂದಿಗೆ ನೀವು ಆಲ್ಮೋರಕ್ಕೆ ಹೋದುದು ಯಾಕೆ ಎಂದು ಈಗ ನನಗರ್ಥವಾಯಿತು. ನಿಜ, ಶ್ರೀಮಾತೆಯವರ ಆಶೀರ್ವಾದ ಯಾವಾಗಲೂ ಅದ್ಭುತವೆ. ಕೇಳಿ, ಯೋಗೇನ್ ಸ್ವಾಮಿ, ಶ್ರೀಮಾತೆಯವರ ಆಶೀರ್ವಾದದ ಅದ್ಭುತ ಅಭಿವ್ಯಕ್ತಿಗೆ ನಾನೇ ಜೀವಂತ ಉದಾಹರಣೆ. ಒಂದು ಸಲ ನಾನು ಕಾಯಿಲೆ ಬಿದ್ದೆ. ನನ್ನ ಸ್ಥಿತಿ ಚಿಂತಾಜನಕವಾಯಿತು. ವೈದ್ಯರೆಲ್ಲ ಕೈ ಚೆಲ್ಲಿಬಿಟ್ಟರು. ರೋಗದಿಂದಾಗಿ ನನಗೆ ಯಾತನೆ ತಡೆಯಲಾಗಲಿಲ್ಲ. ಒಂದು ದಿನ ರಾತ್ರಿ ನಾನು ಒಂದು ಕನಸನ್ನು ಕಂಡೆ. ನನ್ನ ಮುಂದೆ ಒಬ್ಬಾಕೆ ಹೆಂಗಸು ನಿಂತಿದ್ದುದನ್ನು ನಾನು ನೋಡಿದೆ. ನನ್ನ ಕಾಯಿಲೆಯಿಂದ ನಾನು ಬೇಗನೆ ಗುಣಮುಖನಾಗುವೆ ಎಂದು ಹೇಳಿ ನನ್ನನ್ನು ಸಂತೈಸುತ್ತ, ಅವರು ನನಗೆ ಕುಡಿಯಲು ಒಂದು ಕಷಾಯವನ್ನು ಕೊಟ್ಟರು. ಕನಸು ಒಡೆಯಿತು; ಅನಂತರ ನಾನು ಗಾಢ ನಿದ್ರೆಗೆ ಜಾರಿದೆ. ಮರುದಿನ ಬೆಳಿಗ್ಗೆ ಆಶ್ಚರ್ಯ, ನಾನು ಗುಣಮುಖನಾಗಿದ್ದೆ! ನನ್ನ ಕಾಯಿಲೆ ಬಹುತೇಕ ಗುಣವಾಗಿ, ನಾನು ಸಹಜಾವಸ್ಥೆಗೆ ಮರಳುತ್ತಿದ್ದೆ. ಅದು ನನಗೆ ಪವಾಡವೆನಿಸಿತ್ತು. ಏಕೆಂದರೆ ಠಾಕೂರರ ಅಥವಾ ಶ್ರೀಮಾತೆಯವರ ಕೃಪೆಗೆ ಒಳಗಾಗುವ ಭಾಗ್ಯ ಅಲ್ಲಿಯತನಕ ನನಗೆ ಒದಗಿಬಂದಿರಲಿಲ್ಲ ; ಮುಂದೆ ನಾನು ಜಯರಾಮಬಾಟಿಗೆ ಹೋಗಿ ಶ್ರೀಮಾತೆಯವರ ಭೇಟಿಯಾದಾಗ ನನಗೆ ಎಂತಹ ಆನಂದಾಶ್ಚರ್ಯ! ನಾನು ಕನಸಿನಲ್ಲಿ ಕಂಡ ಮಹಿಳೆಯಂತೆಯೇ ಇದ್ದರು ಶ್ರೀಮಾತೆ. ಅವರ ಪ್ರೇಮಮಯ ಧ್ವನಿಯನ್ನು ಕೇಳಿದಾಗಲಂತೂ ನನ್ನ ಆಶ್ಚರ್ಯಕ್ಕೆ ಕೊನೆಯೇ ಇಲ್ಲ — ಕನಸಿನಲ್ಲಿ ನಾನು ಕೇಳಿದ್ದ ಆ ಮಹಿಳೆಯ ಧ್ವನಿಯೂ ಮುಖವೂ ಇದೇ ಆಗಿತ್ತು. ಈಗ ನನಗೆ ಸ್ಪಷ್ಟವಾಯಿತು — ಶ್ರೀಮಾತೆಯವರೇ ನನಗೆ ಕನಸಿನಲ್ಲಿ ಔಷಧಿ ಕೊಟ್ಟು ನನ್ನನ್ನು ಗುಣಪಡಿಸಿದರು, ಎಂದು. ಅವರ ಕೃಪೆಯೇ ನನ್ನನ್ನು ಠಾಕೂರರ ಆತ್ಮೀಯ ಸಂಪರ್ಕಕ್ಕೆ ಕರೆತಂದಿತು ಹಾಗೂ ಅವರ ಪಾದಗಳಲ್ಲಿ ನಾನು ಆಶ್ರಯ ಹೊಂದುವಂತಾಯಿತು. ಅವರ, ನಿಮ್ಮೆಲ್ಲರ ನಿಕಟ ಸಂಪರ್ಕ ಉಂಟಾದುದೂ ಅವರ ಕೃಪೆಯಿಂದಲೇ; ವಿಶೇಷವಾಗಿ ಸ್ವಾಮೀಜಿಯವರ ಸಂಪರ್ಕ — ಅವರು ಶ್ರೀ ಗುರುಮಹಾರಾಜರಿಗಾಗಿ ತಮ್ಮ ಎಳೆಯ ವಯಸ್ಸಿನಲ್ಲಿಯೇ ಎಲ್ಲವನ್ನೂ ಸಮರ್ಪಿಸಿದರು.''

*(ಮುಗಿಯಿತು)*

---

೨ ಗಿರೀಶ್ ಚಂದ್ರ ಘೋಷ್ ಸ್ವಾಮಿ ಯೋಗಾನಂದರನ್ನು ಹಾಗೆ ಕರೆಯುತ್ತಿದ್ದರು.